ಏನ್ ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ" ಎಂದು ಅಳಲತ್ತಿದಳು. "ನಾನು ಶೂಟಿಂಗಲ್ಲಿದೀನಿ. ಆಮೇಲೆ ಫೋನ್ ಮಾಡ್ತೀನಿ." ಎಂದು ಫೋನ್ ಕಟ್ ಮಾಡಿ ಬಿಟ್ಟೆ.

ಸರಿಯಾಗಿ ಇಲ್ಲಿಯೇ ಪ್ರತಿಸಲ ಟಕ್ಕನೇ ಎಚ್ಚರವಾಗುತ್ತೇನೆ. ಆಗಿರುವುದನ್ನೆಲ್ಲವ ಮರೆತು, "ಅಯ್ಯೋ! ನಾನೀಗ್ಲೇ ಬಂದೆ" ಎಂದು ಅವಳ ಬಳಿ ಓಡಬೇಕಿದ್ದ ನಾನು, ಯಾಕೆ ಹಾಗೆ ಹೇಳಿದೆನೋ ಗೊತ್ತಿಲ್ಲ.

ಯಾರನ್ನೋ ಮದುವೆಯಾಗಿ ಹೋದವಳು ಇಲ್ಲಿಯವರೆಗೆ ನನಗೆ ಫೋನು ಮಾಡಿಲ್ಲ ಮತ್ತು ಅವಳು ಬಿಟ್ಟು ಹೋದ ಕೆಲ ದಿನಗಳಲ್ಲೇ ಅವಳ ಹೆಸರಿನ 'ಆನಂದ'ನನ್ನು ಮೊಬೈಲಿನಿಂದ ಡಿಲೀಟ್ ಮಾಡಿದ್ದೆ ಎಂಬ ಎರಡು ವಿಷಯಗಳು ನೆನಪಾಗುತ್ತವೆ. ಪರಿಚಿತರಿಂದ ಅವಳ ವಿಷಯ ಆಗಾಗ ಗೊತ್ತಾಗುತ್ತಲೇ ಇರುತ್ತದೆ. ಸದ್ಯ ನಿಜ ಬದುಕಿನಲ್ಲಿ ಅವಳಿಗೆ, ಅವಳ ಸಂಸಾರಕ್ಕೆ ಏನೂ ಆಗಿಲ್ಲ, ಅವಳು ಚೆನ್ನಾಗೇ ಇದ್ದಾಳೆ.

## 5. ಎಸ್.ಎಮ್.ಎಸ್

ಮೀಟಿಂಗಿನಲ್ಲಿದ್ದೆ, ಪ್ಯಾಂಟಿನಲ್ಲಿದ್ದ ಫೋನ್ ರಿಂಗಾಯಿತು. ಮೌನವಾಗಿ ಮಾತು ಕೇಳುತ್ತಿದ್ದ ಸಭೆಯು ನನ್ನನ್ನು ದುರುಗುಟ್ಟಿತು. ಗಡಿಬಿಡಿಯಲ್ಲಿ ಫೋನನ್ನು ಸೈಲೆಂಟ್ ಮಾಡಿ ಭಾಷಣಕಾರನೆಡೆಗೆ ಕಿವಿ ನೆಟ್ಟೆ. ಸ್ವಲ್ಪ ಹೊತ್ತಿನಲ್ಲೇ ಪ್ಯಾಂಟಿನೊಳಗಿನ ಮೊಬೈಲು ಬೆಳಕಾಗಿ ಮತ್ತೆ ಫೋನ್ ಬರುತ್ತಿರುವುದನ್ನು ಹೇಳಿ ಸುಮ್ಮನಾಯಿತು. ಫೋನ್ ಮಾಡುತ್ತಿರುವುದು ಯಾರೆಂದು ಗೊತ್ತಾಗಲಿಲ್ಲ. ಮನೆಯವರೆಲ್ಲರಿಗೂ ಗೊತ್ತಿತ್ತು, ಟ್ರೈನಿಂಗಿಗೆಂದು ಒಂದು ತಿಂಗಳು ಮುಂಬೈಗೆ ಬಂದಿರುವುದು. ಇದಿನ್ನೂ ಎರಡನೇ ದಿನ, ಪ್ಯಾಂಟು ಮತ್ತೆ ಬೆಳಕಾಯಿತು. ಫೋನ್ ತೆಗೆಯಲು ನೋಡಿದೆ, ಆದರೆ ಎದುರಿಗೆ ಕೂತಿದ್ದವನು ನನ್ನನ್ನೇ ನೋಡುತ್ತಿದ್ದ. ಅವನೆಲ್ಲಿ ಆಯೋಜಕರಿಗೆ ಸುದ್ದಿ ಮುಟ್ಟಿಸಿ, ಅಲ್ಲಿಂದ ಅವರು ನಮ್ಮ ಕಂಪನಿಯವರಿಗೆ ಸುದ್ದಿ ಮುಟ್ಟಿಸಿ ಇನ್ಕ್ರಿಮೆಂಟು, ಪ್ರಮೋಷನ್, ಸಂಬಳಗಳನ್ನು ಕೊಡುವಲ್ಲಿ ಕಿರಿಕಿರಿ ಮಾಡುತ್ತಾರೆಂದು ಸುಮ್ಮನಾದೆ. ಸ್ವಲ್ಪ ಹೊತ್ತಲ್ಲಿ ಮಾತಾಡುತ್ತಿದ್ದವ ಮುಗಿಸಿದ. ಟಕ್ಕನೇ ನಾನು ಫೋನ್ ತೆಗೆದ, ಅಕ್ಕ ಫೋನ್ ಮಾಡಿದ್ದಳು. "ಮೀಟಿಂಗಲ್ಲಿದೀನಿ" ಎಂದು ಟಕಟಕನೇ ಒತ್ತಿ ಮೆಸೇಜು ಕಳಿಸಿದೆ. ಹಿಂದೆಯೇ ಆ ಕಡೆಯಿಂದ ಬಂದ ರಿಪ್ಲೈ, "ಅಮ್ಮ ಹೋಗ್ಬಿಟ್ರು" ಎಂದು ತೋರಿಸಿತು. ಜೀವ ನಿಂತಂತಾಯಿತು, ಕಣ್ಣೀರು ಉಕ್ಕುವ ಸಮಯ. ಟಕ್ಕನೇ ಮೊಬೈಲ್ ಹಿಡಿದು ಎದ್ದು ನಿಂತೆ. ಎಲ್ಲರೂ ನನ್ನನ್ನೇ ನೋಡಿದರು. "ಸೀರಿಯಸ್" ಎಂದು ಹೇಳಿ ಹೊರಬರುವಷ್ಟರಲ್ಲಿ ಅಕ್ಕನ ಇನ್ನೊಂದು ಮೆಸೇಜ್ ಬಂದು, "ಸಾರಿ, ಅಮ್ಮ ಅಲ್ಲ, ಅಪ್ಪ" ಎಂದು ತೋರಿಸಿತು. ಅಮ್ಮ ಅಲ್ಲ ಅಂದಿದಕ್ಕೆ ಸಮಾಧಾನವಾಗಬೇಕೇ? ಅಪ್ಪ ಎಂದಿದ್ದಕ್ಕೆ ಅಳಬೇಕೇ? ಗೊತ್ತಾಗುತ್ತಿಲ್ಲ.

ಪ್ರತಿಸಲ ಇದೇ ಸಮಯಕ್ಕೆ ಕಣ್ಣು ಬಿಡುತ್ತೇನೆ, ಅಪ್ಪ–ಅಮ್ಮ ಹೇಗೇಗೋ ಸತ್ತಿದ್ದಾರೆ, ಕನಸಿನಲ್ಲಿದ್ದಂತೆ ಅಲ್ಲ ಎಂದು ನಿರಾಳನಾಗುತ್ತೇನೆ. ಇದು ಬರೀ ಕನಸೋ ಅಥವಾ ಬೇರೆ ಯಾರದ್ದೋ ಜೀವನದಲ್ಲಿ ನಡೆದಿರುವುದೋ, ಯಾರಿಂದಲೋ ಕೇಳಿದ್ದೋ, ಎಲ್ಲೋ ಓದಿದ್ದೋ, ಯಾವುದೋ ಸಿನಿಮಾದಲ್ಲಿ ನೋಡಿದ್ದೋ ನೆನಪಿಲ್ಲ, ಗೊತ್ತಿಲ್ಲ. ಇದನ್ನು ಅನುಭವಿಸಿದವನು ನಾನಲ್ಲ, ಅನುಭವಿಸಿದವರು ಯಾರೋ? ಎಲ್ಲಿದ್ದಾರೋ? ಹೇಗಿದ್ದಾರೋ. ಅವರ ಕನಸನ್ನು ನಾನು ಕಂಡಿದ್ದಕ್ಕೆ ಏನೆಂದುಕೊಳ್ಳುವರೋ? ಏನನ್ನವರೋ? ಎಂಬ ಪ್ರಶ್ನೆಗಳ ಸುಳಿಯಲ್ಲಿ ಸಿಲುಕಿರುವಾಗಲೂ ಇನ್ನೊಬ್ಬರ ಅನುಭವ ನನಗೆ ಹೇಗೆ ನನ್ನ ಕನಸಾಯಿತು? ಎಂಬುದೇ ಪ್ರತಿಸಲ ಕಾಡುವ ಭೀಕರ ಪ್ರಶ್ನೆ.

## 6. ಕಾರು

"ಅಪ್ಪಾ, ಪ್ಲೀಸ್ ಟೇಕ್ ಕೇರ್" ಎಂದು ಕಾರ್ ಓಡಿಸುತ್ತಿದ್ದ ಮಗ ಪಕ್ಕದಲ್ಲಿದ್ದ ನನಗೆ ಹೇಳಿದ. ಮೈಸೂರಿನ ಆಸ್ಪತ್ರೆಯಿಂದ ಬೆಂಗಳೂರಿನ ದಾರಿ ಹಿಡಿದಿದ್ದೆವು. ಫ್ಯಾಮಿಲಿಯ ಡಾಕ್ಟರ್ ಅಲ್ಲೇ ಇದ್ದರು. ಅವರಿಂದಲೇ ತೋರಿಸಿಕೊಂಡರೆ ಮನಸ್ಸಿಗೆ ಸಮಾಧಾನ ಎಂದು ನಾನು ಹೇಳಿದ್ದಕ್ಕೆ ಮಗ ಹೀಗೆ ಶನಿವಾರದ ಬೆಳಿಗ್ಗೆ ಕರೆದುಕೊಂಡು ಬಂದಿದ್ದ. "ಎಣ್ಣೆ, ಮಸಾಲೆ, ಸ್ವೀಟ್ಸ್ ಎಲ್ಲಾ ಬಿಡ್ಬೇಕು ಸರ್ ನೀವು" ಎಂದು ಡಾಕ್ಟರ್ ಹೇಳಿದಾಗ, "ಹಂಗೇ ಪ್ರಾಣಾನೂ ಬಿಟ್ಬಿಡ್ತೀನಿ" ಎಂದು ಮನಸ್ಸಿನಲ್ಲಿ ಹೇಳಿಕೊಂಡು ನಕ್ಕೆ. ಡಾಕ್ಟರ್ ಬರೆದಿದ್ದ ಮದ್ದುಗಳನ್ನು ತೆಗೆದುಕೊಂಡು ಬಂದಿದ್ದ ಮಗ ಸಿಟ್ಟಾಗಿದ್ದ.

ಮೈಸೂರಿನಿಂದ ಹೊರಬಂದಾಗ "ಅಪ್ಪಾ, ಪ್ಲೀಸ್ ಟೇಕ್ ಕೇರ್" ಎಂದ. ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ ಬಂದಾಗ ಅವನಿಗೆ ಉತ್ತರಿಸಿದ್ದೇನೆ, "ಆಯ್ತು" ಎಂದು. ಈಗ ಮತ್ತೆ ಅದನ್ನೇ ಹೇಳಿದ್ದ, "ಅಪ್ಪಾ, ಪ್ಲೀಸ್ ಟೇಕ್ ಕೇರ್" ಎಂದು. ನಾನು, "ಯಾಕೋ ಪದೇ ಪದೇ ಅದ್ನೇ ಕೇಳ್ತಿದ್ಯಾ?" ಎಂದೆ. ಮಗ ಏನೂ ಹೇಳಲಿಲ್ಲ. ಕಾರು ಜೋರಾಗಿ ಓಡುತ್ತಲೇ ಇತ್ತು. "ಹೇಳು" ಎಂದು ಗದರಿದಾಗ ನನ್ನತ್ತ ತಿರುಗಿದವನು ಮತ್ತೆ ರೋಡಿನ ಮೇಲೆ ಕಣ್ಣು ಇಡುವಷ್ಟರಲ್ಲಿ ಎದುರಿನಿಂದ ಲಾರಿ ನುಗ್ಗಿ ಬಂತು. ನಮ್ಮ ಕಾರು ಗಕ್ಕನೇ ನಿಂತಿತು, ಲಾರಿಯೂ ನಿಂತಿತು. ಗಾಬರಿಯಲ್ಲಿ ಅತ್ತಿತ್ತ ನೋಡಿದೆ, ಅಪಘಾತವಾಗಿರಲಿಲ್ಲ. ನನಗೆ ಜೀವ ಹೋಗಿಬಂದ ಅನುಭವ. ಪಕ್ಕದಲ್ಲಿದ್ದ ಮಗ ಸೀಟಿಗೆ ಒರಗಿ ಎದುರಿಗೆ ನಿಂತಿದ್ದ ಲಾರಿಯನ್ನೇ ನೋಡುತ್ತಿದ್ದ. ಎಚ್ಚರಿಸಿದೆ, ಜೀವವಿರಲಿಲ್ಲ, ಮಗನ ಹೃದಯ ನಿಂತಿತ್ತು! ಎಷ್ಟೇ ಪ್ರಯತ್ನಿಸಿದರೂ ನನ್ನಿಂದ ಅಳಲು ಆಗಲಿಲ್ಲ. ಆಸ್ಪತ್ರೆಯಲ್ಲಿ ಡಾಕ್ಟರ್ ಬಂದು, "ನಿಮ್ ಮಗನ್ ಹಾರ್ಟು ವೀಕ್ ಇತ್ತು ಸರ್. ನಿಮ್ಗೆ ಹೇಳ್ಬೇಡ ಅಂದಿದ್ರು" ಎಂದರು.

ಹೆಂಡತಿ, ಸೊಸೆ, ಮೊಮ್ಮಗಳಿಗೆ ಫೋನ್ ಮಾಡಿ ಈಗ ಏನು ಹೇಳುವುದು? ಈ ಕನಸಿನಲ್ಲೇನಾದರೂ ದಾರಿ ಸಿಗಬಹುದೇ ಎಂದು ಕಾಯುತ್ತೇನೆ. ಎಷ್ಟೇ ಕಾದರೂ ಕನಸು ಮುಂದುವರೆಯುವುದೇ ಇಲ್ಲ. ಮಕ್ಕಳೇ ಇಲ್ಲದ ನನಗೆ ಈ ಕನಸು ಏಕೆ ಬೀಳುತ್ತಿದೆ?

## 7

ಮೀಸೆಜ್ಜ, ಹೋಮ್‌ವರ್ಕ್, ರಿಮೋಟ್, ಹೀರೋ, ಎಸ್.ಎಮ್.ಎಸ್, ಕಾರು ಎಂದು ಹೆಸರು ಬರೆದುಕೊಂಡಿದ್ದ ಪೇಪರ್‌ಗಳನ್ನು ಮಾನಸಿಕ ಮತ್ತು ಹಿಪ್ನೋಟಿಸಂ ತಜ್ಞ ವಿಕಾಸ್‌ಗಾಗಿ ಬರೆಯಲ್ಪಟ್ಟಿದ್ದವು.

ಕನಸುಗಳನ್ನು ಬರೆದುಕೊಟ್ಟವರು ಇತ್ತೀಚಿಗೆ ದಿನಪತ್ರಿಕೆಯಲ್ಲಿ ಜಾಹೀರಾತೊಂದನ್ನು ನೋಡಿದ್ದರು. 'ಹಳೆಯ ಕನಸು ಮರೆಯೋಣ, ಹೊಸ ಕನಸು ಕಾಣೋಣ' – ಕನಸುಗಳು ಕಾಡುತ್ತಿವೆಯೇ? ಬನ್ನಿ, ಕಾಡುವ ಕನಸುಗಳನ್ನು ನಾವು ಅಳಿಸಿಹಾಕುತ್ತೇವೆ. ಇನ್ನೊಮ್ಮೆ ಆ ಕನಸುಗಳು ನಿಮಗೆ ಬಿದ್ದರೆ ನಿಮ್ಮ ಹಣ ನಿಮಗೆ ವಾಪಸ್! ಈ ಕೊಡುಗೆ ಸೀಮಿತ ಅವಧಿಯವರೆಗೆ ಮಾತ್ರ. ಸ್ಟೇಷನ್ ರೋಡ್‌ನಲ್ಲಿ, 'ಹೋಟೆಲ್ ಶ್ರೀ ಲಾಡ್ಜ್'ನ ರೂಮ್ ನಂಬರ್ 531ರಲ್ಲಿ, ನಮ್ಮ ಪ್ರಖ್ಯಾತ ಮಾನಸಿಕ ಮತ್ತು ಹಿಪ್ನೋಟಿಸಂ ತಜ್ಞ ವಿಕಾಸ್ ಅವರನ್ನು ಭೇಟಿಯಾಗುವ ಮೊದಲು ನಿಮ್ಮ ಕಾಡುವ ಕನಸನ್ನು ಬರೆದು ಅದಕ್ಕೆ ಒಂದು ಹೆಸರು ಕೊಟ್ಟು ಹೋಗಿ, ನಾವೇ ನಿಮ್ಮನ್ನು ಸಂಪರ್ಕಿಸುತ್ತೇವೆ. ಸಮಯ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಹಾಗೂ ಸಂಜೆ 5ರಿಂದ ರಾತ್ರಿ 9ರವರೆಗೆ" ಎಂಬ ಜಾಹೀರಾತದು.

ಜಾಹೀರಾತಿಗೆ ಅತ್ಯದ್ಭುತ ಪ್ರತಿಕ್ರಿಯೆ ದೊರಕಿತ್ತು. ನೂರಾರು ಜನ ಬಂದು ತಮ್ಮನ್ನು ಕಾಡುತ್ತಿದ್ದ ಕನಸನ್ನು ಬರೆದು ಅದಕ್ಕೊಂದು ಹೆಸರೂ ಕೊಟ್ಟಿದ್ದರು. ಸಾವು ಮತ್ತು ಅದರ ಸುತ್ತಮುತ್ತಲೂ ಇದ್ದ ಈ ಆರು ಕನಸುಗಾರರನ್ನು ಮೊದಲ ದಿನದ ಸಂದರ್ಶಕ್ಕೆಂದು ಬೆಳಿಗ್ಗೆ ಹತ್ತು ಗಂಟೆಗೆ ಕರೆಯಲು ಹೇಳಿದ್ದ ವಿಕಾಸ್. ಆದರೆ ಹೇಳಿದ ಸಮಯಕ್ಕೆ ಸರಿಯಾಗಿ ಬಂದವನು 'ಹೀರೋ' ಕನಸು ಬರೆದವನೊಬ್ಬನೇ. ಈಗ ವಿಕಾಸನ ಎದುರು ಕೂತಿದ್ದ ಅವನು ಟೇಬಲ್ಲಿನ ಮೇಲಿದ್ದ ಬೇರೆ ಬೇರೆಯವರ ಕನಸುಗಳ ಹಾಳೆಗಳನ್ನು ಓದುತ್ತಿದ್ದ. ಸ್ಟಾರ್ ಆಗಿದ್ದ ಹೀರೊ ಬಂದಿದ್ದಕ್ಕೆ ವಿಕಾಸನಿಗೆ ತನ್ನ ಬಗ್ಗೆಯೇ ಹೆಮ್ಮೆಯಾಗಿತ್ತು.

ತನ್ನ ಸಂದರ್ಶಕ್ಕೆಂದು ನೂರಾರು ಜನ ಕಾಯುತ್ತಿರುವಾಗ ತನ್ನನ್ನು ಕಾಯಿಸುತ್ತಿರುವ ಉಳಿದ ಐದು ಕನಸುಗಳವರನ್ನು ಕ್ಷಣ ಕ್ಷಣಕ್ಕೂ ಬೈದುಕೊಂಡ ವಿಕಾಸ್. ಖುದ್ದಾಗಿ ಅವರಿಗೆ ಫೋನ್ ಮಾಡಿದ. ಎಲ್ಲಾ ನಂಬರ್‌ಗಳು ಸ್ವಿಚ್ ಆಫ್ ಬರುತ್ತಿದ್ದವು. ಹೀರೊನನ್ನು ಕಾಯಿಸುತ್ತಿರುವುದು ತಪ್ಪೆಂದು ವಿಕಾಸ್‌ಗೆ ಅರಿವಾಗಿ, "ಸಾರ್, ಒಂದ್ ಟೆನ್ ಮಿನಿಟ್ಸ್... ಇನ್ನೂ ಐದ್ ಜನ್ ಬರೋರಿದಾರೆ... ಅವ್ರು ಬಂದ ತಕ್ಷಣ ಮೊದ್ಲು ಒಂದು ಜನರಲ್ ಕೌನ್ಸೆಲಿಂಗ್ ಥರಾ ಶುರು ಮಾಡಾಣ" ಎಂದಾಗ ಹೀರೊ ಟಕ್ಕನೇ, "ಈ ಐದು ಜನ ಬಿಟ್ಟು ಬೇರೇ ಐದ್ ಜನಾನ?" ಎಂದು ತನ್ನ ಅಕ್ಕಪಕ್ಕ ಖಾಲಿ ಇದ್ದ ಕುರ್ಚಿಗಳನ್ನು ತೋರಿಸಿದ. ವಿಕಾಸ್ ಗಾಬರಿ ಮತ್ತು ಅಚ್ಚರಿಯಲ್ಲಿ, "ಯಾರಿದಾರೆ ಸರ್ ಅಲ್ಲಿ?" ಎಂದಾಗ "ನನ್ ಥರಾನೇ ಕನಸುಗಳನ್ನ ಬರ್ದು ಕೊಟ್ಟೋರು" ಎಂದ. "ಇವ್ರು ಬೇರೆ ಯಾರೂ ಅಲ್ಲ ಡಾಕ್ಟರ್,